ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಪಿ. ಸಿ. ಆರ್ ಸಂಖ್ಯೆ **76-2019** ಪಿ.ಡಬ್ಲ್ಯೂ **02**

ಸಾಕ್ಷಿಯ ಹೆಸರು - ರಾಮಕ್ಕ
ಗಂಡನ ಹೆಸರು - ಚೌಡಪ್ಪ
ವಯಸ್ಸು - 65 ವರ್ಷ
ಉದ್ಯೋಗ - ವ್ಯವಸಾಯ
ವಾಸ ಸ್ಥಳ - ಮಾಳಾಪುರ

ದಿನಾಂಕ 25-08-2021 ರಂದು ಪ್ರಮಾಣ ವಚನ ಮಾಡಿಸಲಾಯಿತು.

ಪಿರ್ಯಾದಿದಾರರ ಪಮಾಣ ಪೂರ್ವಕ ಹೇಳಿಕೆ

* * * *

ನನಗೆ ಪಿರ್ಯಾದಿದಾರರಾದ ತಿಪ್ಪಯ್ಯ ಗೊತ್ತು ಆತ ನನ್ನ ತಮ್ಮನಾಗಬೇಕು. ನಾನು ಮಾರಕ್ಕ ರವರ ವಿರುದ್ದ ಸಾಕ್ಷಿ ಹೇಳಲು ಬಂದಿರುತ್ತೇನೆ. ಮಾರಕ್ಕ ರವರು ನಮಗೆ ಸೇರಿದ ಸರ್ವೆ ನಂಬರ **41** ರ ವಿಸ್ತೀರ್ಣ **8** ಎಕರೆ ಹೊಲವನ್ನು ನಮಗೆ ಬಿಟ್ಟುಕೊಡುತ್ತಿಲ್ಲ. ಸದರಿ ಆಸ್ತಿ ಮೂಲತಃ ನನ್ನ ತಾತನವರಾದ ಚೆನ್ನಯ್ಯ ರವರಿಗೆ ಸೇರಿದ ಆಸ್ತಿಯಾಗಿರುತ್ತದೆ. ನನ್ನ ತಾತನವರಾದ ಚೆನ್ನಯ್ಯ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದು ಅವರೆಂದರೆ ಹೊನ್ನೂರಮ್ಮ ಮತ್ತು ಗೌರಮ್ಮ. ನನ್ನ ತಾತನವರ ಮರಣಾ ನಂತರ ಮೇಲ್ಕಂಡ ಸ್ವತ್ತು ಹೊನ್ನೂರಮ್ಮ ಮತ್ತು ಗೌರಮ್ಮ ರವರ ಹೆಸರಿಗೆ ಖಾತೆಯಾಗಿರುತ್ತದೆ. ಈಗ ಹೊನ್ನೂರಮ್ಮ ಮತ್ತು ಗೌರಮ್ಮ ರವರು ಮರಣ ಹೊಂದಿರುತ್ತಾರೆ. ನಾನು ಮತ್ತು ಸಂಡೂರಮ್ಮ ಗೌರಮ್ಮ ರವರ ಮಕ್ಕಳಾಗಿರುತ್ತೇವೆ. ತಿಪ್ಪಯ್ಯ ರವರು ಹೊನ್ನೂರಮ್ಮ ರವರ ಮಗನಾಗಬೇಕು. ಮಾರಕ್ಕ ರವರು ನಮಗೆ ಗೊತ್ತಿಲ್ಲದಂತೆ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ. ಸದರಿ ಆಸ್ತಿ ಮಾರಕ್ಕ ರವರಿಗೆ ಸೇರಿದ ಆಸ್ತಿಯಾಗಿರದೇ ನಮಗೆ ಸೇರಿದ ಆಸ್ತಿಯಾಗಿರುತ್ತದೆ. ಮಾರಕ್ಕ ನಮಗೆ ಮೋಸ ಮಾಡಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುವುದರಿಂದ ನನ್ನ ತಮ್ಮ ಮಾರಕ್ಕ ರವರ ವಿರುದ್ದ ಕೇಸನ್ನು ದಾಖಲಿಸಿರುತ್ತಾರೆ. ಮಾರಕ್ಕ ರವರು ನಮಗೆ ಗೊತ್ತಿಲ್ಲದಂತೆ ಆಕೆಯ ಹೆಸರಿಗೆ ಖಾತೆ ಮಾಡಿಸಿಕೊಂಡಿರುವುದರಿಂದ ಆಕೆಗೆ ಲಾಭವಾಗಿದ್ದು ನಮಗೆ ನಷ್ಟವಾಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾದಂ., ಸಂಡೂರು.